ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರದ ಜಯನಗರ ಪ್ರದೇಶದಲ್ಲಿ ಆರ್.ಟಿ.ಓ. ಕಛೇರಿ ಏನಿದೆ ಅದು ಬಹು ಅಂತಸ್ತಿನ ಮಂಹಡಿ ಮೇಲೆ ಇರುವುದರಿಂದ ಜನಗಳಿಗೆ ಹೋಗಿ ಬರುವುದಕ್ಕೆ ತೊಂದರೆ ಯಲ್ಲದೆ, ವಾಹನಗಳನ್ನು ರಸ್ತೆಗಳಲ್ಲಿ ನಿಲ್ಲಿಸಿ ಪಾದಚಾರಿಗಳಿಗೆ ಕೂಡ ತೊಂದರೆಯಾಗಿದೆ. ಆದ್ದರಿಂದ ಅದನ್ನು ಅಲ್ಲಿಂದ ಬದಲಾವಣೆ ಮಾಡಬೇಕು ಎಂದು ಅಲ್ಲಿನ ಜನಗಳಿಂದ ದೂರು ಬಂದಿರುವುದು ನಿಜ ತಾನೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ನನಗೇನೂ ದೂರು ಬಂದಿಲ್ಲ, ಹಾಗೇನಾದರೂ ತೊಂದರೆ ಯಾಗಿದ್ದರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಕಳೆದ ಸಾರಿ ಅವರ ಡಿಮ್ಯಾಂಡ್ಸ್‌ನಲ್ಲಿ, ಯಶವಂತಪುರದ ಬಳಿ ಹೆವಿ ಪೆಹಿಕಲ್ ಟರ್ಮಿನಸ್ ಕಟ್ಟುತ್ತೇವೆಂದು ಹೇಳಿದ್ದರು. ಅದು ಯಾವ ಹಂತದಲ್ಲಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ಆ ವಿವರ ನನ್ನ ಹತ್ತಿರ ಇಲ್ಲ, ಒದಗಿಸಿಕೊಡುತ್ತೇನೆ.

## Kudregundi Halla Project in Nanjangud Taluk

1127. SRI K.B. SHIVAIAH (Nanjangud).—Will the Minister for Transport and Minor Irrigation be pleased to state :—

(a) whether there is a proposal before the Government to construct Kudregundi Halla Project in Nanjangud taluk, out of the World Bank Assistance ;

(b) whether the plans and estimates for this project have been prepared;

(c) when this project will be commenced?

SRI M.M.J. SADYOJATHA (Minister for Transport and Minor Irrigation).—

(a) Yes.

(b) The plans and estimates are under preparation.

(c) The date of commencement cannot be given at this stage.

ಶ್ರೀ ಕೆ. ಬಿ. ಶಿವಯ್ಯ.—ಈ ಕುದುರೆಗುಂಡಿ ಹಳ್ಳದ ಯೋಜನೆಯ ಅಂದಾಜು ವೆಚ್ಚವನ್ನು ತಿಳಿಸಬೇಕು ಹಾಗೂ ಎಷ್ಟು ಹೆಕ್ಟೇರಿಗೆ ನೀರಾವರಿಯಾಗುತ್ತದೆಂದು ಕೇಳುತ್ತಾ ಇದ್ದೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇದರಿಂದ ೮೦೦ ಹೆಕ್ಟೇರ್ಸ್‌ಗೆ ನೀರಾವರಿ ಆಗುತ್ತದೆ, ೨ ಕೋಟಿ ರೂಪಾಯಿ ವೆಚ್ಚವಾಗುತ್ತದೆ.

ಶ್ರೀ ಕೆ.ಬಿ. ಶಿವಯ್ಯ.—ನನ್ನ ಇನ್ನೊಂದು ಪ್ರಶ್ನೆಯಲ್ಲಿ 'ಈ ಯೋಜನೆಯನ್ನು ಯಾವಾಗ ಪ್ರಾರಂಭಿಸ ಲಾಗುವುದು, ಎಂದು ಕೇಳಿದ್ದಕ್ಕೆ 'ಈ ಹಂತದಲ್ಲಿ ಪ್ರಾರಂಭ ಮಾಡುವ ದಿನಾಂಕವನ್ನು ನೀಡಲಾಗಲಿಕ್ಕಿಲ್ಲ ಎಂದು ಉತ್ತರಿಸಿದ್ದೀರಿ. ದಯವಿಟ್ಟು ಆದನ್ನು ಯಾವಾಗ ನಿಖರವಾಗಿ ಸರ್ಕಾರ ಮಾಡುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ಕೆಲಸವನ್ನು ಇದೇ ವರ್ಷವೇ ಪ್ರಾರಂಭ ಮಾಡುತ್ತಾ ಇದ್ದೇವೆ.